**ಪಾಠ-13** **ಡಿಸೆಂಬರ್ 19-25**

# ಪರಲೋಕ, ಶಿಕ್ಷಣ ಮತ್ತು ನಿರಂತರ ಕಲಿಕೆ



**ಸಬ್ಬತ್ತು ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೋಹಾನ 3:16; 1 ಯೋಹಾನ 5:13; 1 ತಿಮೊಥಿ 1:16; 1 ಕೊರಿಂಥ 13:12; ಜೆಕರ್ಯ 13:6.

**ಸ್ಮರಣವಾಕ್ಯ : "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ"** (1 ಕೊರಿಂಥ 2:9).

ಸಾವಿನ ಹೆದರಿಕೆಯಲ್ಲಿದ್ದ ಕವಿಯೊಬ್ಬ: "ಮುಂಜಾನೆ ಎಂದರೇನು. ಸಾವು ಎಂದರೇನು, ಜೀವನಂತ್ಯ ಎಂದರೇನು, ಸಮಾಧಿಯನ್ನು ಮೀರಿ ಪ್ರಜ್ಞೆಗಾಗಿ ಕಾಯುವುದು ಎಂದರೇನು" ಎಂಬುದನ್ನು ತಿಳಿದುಕೊಳ್ಳದೆ ಒಬ್ಬ ವ್ಯಕ್ತಿ ಬದುಕುವುದಾದರೂ ಹೇಗೆ ಎಂದು ಕೇಳಿದ್ದಾನೆ. ಅವನು ತನ್ನ ಪದ್ಯದಲ್ಲಿ IPH ಎಂಬ ಪದಪುಂಜನನ್ನು ಹುಟ್ಟು ಹಾಕಿದ್ದಾನೆ. IPH ಎಂದರೆ "Institute of Preparation for the Hereafter" (ಭವಿಷ್ಯಕ್ಕೆ ಸಿದ್ಧತೆಯ ಸಂಸ್ಥೆ). ಭವಿಷ್ಯದಲ್ಲಿ ಏನಾಗುತ್ತದೆ ಎಂದೇ ಗೊತ್ತಿಲ್ಲದ ವ್ಯಕ್ತಿ, ಭವಿಷ್ಯಕ್ಕೆ ಎಂತಹ ಸಿದ್ಧತೆ ಮಾಡುವನು?

ಸುದೈವವಶಾತ್, ಸತ್ಯವೇದವು ಪರಲೋಕ, ನೂತನಭೂಮಿ ಮತ್ತು ನಿತ್ಯಕಾಲದುದ್ದಕ್ಕೂ ನಾವು ಕಲಿಯಲಿರುವ ವಿಷಯ ಮತ್ತು ಜೀವನ ಶೈಲಿಯ

* **ಡಿಸೆಂಬರ್ 26ರ ಸಬ್ಬತ್ತಿನ ಸಬ್ಬತ್ ಶಾಲೆಗೆ ಸಿದ್ಧರಾಗಲು ಈ ವಾರದ ಪಾಠ ಓದಿಕೊಳ್ಳಿರಿ.**

ಕುರಿತು ಒಳನೋಟ ನೀಡಿದೆ. ಈ ತ್ರೈಮಾಸಿಕದಲ್ಲಿ IPH ಈಗ, ಇಲ್ಲೆ ಇದೆ. ನಮ್ಮ ಜೀವನದಲ್ಲಿದೆ. ನಮ್ಮ ಶಿಕ್ಷಣದಲ್ಲಿದೆ. ನಾವು ಯಾವ ರೀತಿಯಲ್ಲಿಯೇ ಇರಲಿ, ನಾವು ಭವಿಷ್ಯಕ್ಕೆ (ಪರಲೋಕಕ್ಕೆ) ಸಿದ್ಧರಾಗಬೇಕಾಗಿದೆ.

ಶಾಲೆ ಯಾವುದೇ ಆಗಿರಲಿ, ಅದು ಬಹಳಷ್ಟು ಮಾಹಿತಿಗಳನ್ನು ನಮ್ಮ ಮುಂದೆ ಹಾದು ಹೋಗುವಂತೆ ಮಾಡುತ್ತದೆ. ಸಾಕಷ್ಟು ಒಳ್ಳೇ ಪ್ರಾಯೋಗಿಕ ಮತ್ತು ಸಹಾಯಕ ಜ್ಞಾನವನ್ನು ಕೊಡುತ್ತದೆ. ಒಬ್ಬ ವ್ಯಕ್ತಿ ಈ ಎಲ್ಲಾ ಜ್ಞಾನಗಳನ್ನೂ ಪಡೆದುಕೊಂಡ ನಂತರವೂ, ನಿತ್ಯಜೀವವನ್ನು ಕಳೆದುಕೊಂಡರೆ, ಏನು ಪ್ರಯೋಜನವಾದಂತಾಯಿತು? ಕೊನೆಯದಾಗಿ ಪದವಿ ಕೊಡುವ ಶಾಲೆ, ನಿತ್ಯಕಾಲಕ್ಕೂ ಇರುವ ಶಾಲೆ ಮತ್ತು ನಿತ್ಯಕಾಲಕ್ಕೂ ಕಲಿಸುವ ಮತ್ತು ಬೆಳೆಸುವ ಶಾಲೆಯ ಕುರಿತು ದೈವಪ್ರೇರಣೆಯ ಕುರಿತು ಈ ವಾರ ನಾವು ಕಲಿಯಲಿದ್ದೇವೆ.

**ಭಾನುವಾರ** **ಡಿಸೆಂಬರ್ 20**

## ಸತ್ತವರ ಸ್ಥಿತಿಗತಿ

ಕ್ರಿ.ಶ. 1600ರಲ್ಲಿ, ಒಬ್ಬ ಫ್ರೆಂಚ್ ಬರಹಗಾರನಿದ್ದ. ಅವನ ಹೆಸರು ಬ್ಲೈಸ್ ಪ್ಯಾಸ್ಕಲ್. ಅವನು ಮಾನವನ ಸ್ಥಿತಿಗತಿಗಳನ್ನು ಕುರಿತು ಚಿಂತಿಸುತ್ತಿದ್ದ. ಅವನಿಗೆ ಒಂದು ಅಂಶ ಸ್ಪಷ್ಟವಾಗಿತ್ತು. ಒಬ್ಬ ಮನುಷ್ಯ ಎಷ್ಟು ದೀರ್ಘಕಾಲ ಬದುಕಿದ್ದರೂ (ಆ ಕಾಲಕ್ಕೆ ಜನ ದೀರ್ಘಕಾಲ ಬದುಕುತ್ತಲೂ ಇರಲಿಲ್ಲ). ಅವನ ಜೀವನ ಅದೆಷ್ಟು ಒಳ್ಳೆಯದಾಗಿದ್ದರೂ (ಆಗಿನ ಕಾಲಕ್ಕೆ ಬಹಳ ಸೌಕರ್ಯವೂ ಇರಲಿಲ್ಲ). ಅಲ್ಪಕಾಲದಲ್ಲಿ, ಇಲ್ಲವೇ ಇನ್ನಷ್ಟು ಕಾಲವಾದ ಮೇಲೆ ಅವನು ಸಾಯುವುದಂತೂ ಖಚಿತ.

ಸಾವಿನ ಮುಂಚಿನ ಮಾನವನ ಜೀವನ ಅಲ್ಪ ಅವಧಿಯದು. ಆದರೆ ಸಾವಿನ ನಂತರದ ಅವನ ಜೀವನ ದೀರ್ಘ ಅವಧಿಯದು; ಅನಂತವಾದದ್ದು. ಪ್ಯಾಸ್ಕಲನಿಗೆ, ಒಬ್ಬ ವ್ಯಕ್ತಿಯು ಕಂಡುಕೊಳ್ಳಬಹುದಾದ ಅಥವಾ ಕಂಡು ಹಿಡಿಯಬೇಕಾದ ಅತ್ಯಂತ ತಾರ್ಕಿಕ ವಿಷಯವೆಂದರೆ ಸತ್ತವರಿಗೆ ಎಂಥ ಸ್ಥಿತಿ ಕಾಯುತ್ತಿದೆ ಮತ್ತು ಜನರು "ಕಚೇರಿಯ ನಷ್ಟ, ಅಥವಾ ಅವರ ಗೌರವಕ್ಕೆ ಕೆಲವು ಕಾಲ್ಪನಿಕ ಅವಮಾನಗಳು" ಮುಂತಾದ ವಿಷಗಳ ಬಗ್ಗೆ ಎಲ್ಲರೂ ಕೆಲಸ

ಮಾಡುವವರನ್ನು ನೋಡಿ ಅವರು ಆಶ್ಚರ್ಯಚಕಿತರಾದರು. ಆದರೂ ಅವರು ಸತ್ತ ನಂತರ ಏನಾಗುತ್ತದೆ ಎಂಬ ಪ್ರಶ್ನೆಗೆ ಗಮನವೇ ಹರಿಸಲಿಲ್ಲ.

ಪ್ಯಾಸ್ಕಲ್‌ಗೆ ಇಲ್ಲಿ ಹೇಳುವುದಕ್ಕೆ ಒಂದು ವಿಷಯವಿದೆ. ಯಾರು ಕ್ರಿಸ್ತನಲ್ಲಿ ರಕ್ಷಣೆಯನ್ನು ಕಂಡುಕೊಂಡಿದ್ದಾರೋ, ಅವರಿಗೆ ಮಾಡಲ್ಪಟ್ಟಿರುವ ವಾಗ್ದಾನವನ್ನು ಕುರಿತು ಸತ್ಯವೇದ ಬಹಳಷ್ಟು ಸಮಯ ತೆಗೆದುಕೊಂಡು ಮಾತಾಡಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆ ವಾಗ್ದಾನ, ಭವಿಷ್ಯದಲ್ಲಿ ಪ್ರಾಪ್ತವಾಗುವ ಆಶೀರ್ವಾದಗಳನ್ನು ಕುರಿತದ್ದೇ ಆಗಿದೆ.

**ಈ ಸತ್ಯವೇದ ವಾಕ್ಯಗಳನ್ನು ಓದಿಕೊಳ್ಳಿರಿ. ಇಲ್ಲಿ ನಮಗಿರುವ ನಿರೀಕ್ಷೆಗಳೇನು?** ಯೋಹಾನ 6:54, ಯೋಹಾನ 3:16, 1 ಯೋಹಾನ 5:13; 1 ತಿಮೊಥಿ 1:16; ಯೋಹಾನ 4:14; ಯೋಹಾನ 6:40; ಯೂದ 1:21; ತೀತ 3:7.

________________________________________

________________________________________

ಶಿಲುಬೆಯ ಬೆಳಕಿನಡಿಯಲ್ಲಿ ನಿತ್ಯಜೀವ ಹೆಚ್ಚು ಅರ್ಥಪೂರ್ಣವಾಗಿದೆ. ಶಿಲುಬೆ, ನಿತ್ಯಜೀವವನ್ನಲ್ಲದೆ ಬೇರಾವ ವಿಷಯವನ್ನು ಅಷ್ಟಾಗಿ ಒತ್ತಿ ಹೇಳುವುದಿಲ್ಲ. ವಿಶ್ವವನ್ನು ಸೃಷ್ಟಿ ಮಾಡಿದಾತನೆ– "ಜಗತ್ತನ್ನು ಉಂಟುಮಾಡಿದನು" (ಇಬ್ರಿ 1:2), "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" (ಅ.ಕೃ. 17:28). ಆ ದೇವರೇ ಮಾನಾವತಾರದಲ್ಲಿ ಬಂದಿದ್ದನು. ಮಾನವನಾಗಿ ಮರಣಿಸಿದನು........ ಯಾವುದಕ್ಕಾಗಿ? ಕೊನೆಯಲ್ಲಿ, ರಸ್ತೆಯಲ್ಲಿ ಅಪಘಾತಕ್ಕೊಳಗಾದವನು ಸತ್ತು ಕೊಳೆಯುತ್ತಾನಲ್ಲ, ಹಾಗೆ ಕೊಳೆಯುವುದಕ್ಕಾಗಿಯೇ? ಹೊಸ ಒಡಂಬಡಿಕೆಯಲ್ಲಿ ನಿತ್ಯಜೀವದ ವಾಗ್ದಾನಗಳು ಹಾಸುಹೊಕ್ಕಾಗಿ ಬಂದಿರುವುದನ್ನು ನಾವು ಕಾಣಬಹುದು. ಈಗ ಆಗಿರುವ ಕೆಟ್ಟದ್ದನ್ನು ಸರಿಪಡಿಸುವುದಕ್ಕೆ ಹತ್ತು ದಶಲಕ್ಷ (1 ಮಿಲಿಯನ್) ವರ್ಷಗಳು ಕೋಟಿ (ಬಿಲಿಯನ್) ವರ್ಷಗಳಾದರೂ ಸಾಲದು, ಆದರೆ ನಿತ್ಯತ್ವ ಎಲ್ಲವನ್ನೂ ಸರಿಪಡಿಸಬಲ್ಲದು. ಅಮರತ್ವವುಳ್ಳವನೊಬ್ಬನೇ, ನಶ್ವರವಾದದ್ದೆಲ್ಲಕ್ಕಿಂತ ದೊಡ್ಡವನು. ಸರ್ವಶಕ್ತನು.

ಪ್ಯಾಸ್ಕಲನ ನಿಲುವು ಸರಿಯಾಗಿದೆ. ಏನು ಭವಿಷ್ಯದಲ್ಲಿ ಬರಲಿಕ್ಕಿದೆಯೋ (ನಿತ್ಯಜೀವ) ಅದಕ್ಕೆ ಹೋಲಿಸಿದರೆ, ನಮ್ಮ ಇಲ್ಲಿನ ಜೀವನ ಕ್ಷಣಿಕ. ನಮಗಾಗಿ ಕಾಯುತ್ತಿರುವ ಆ ನಿತ್ಯಜೀವಕ್ಕೆ ನಾವು ಸಿದ್ಧತೆಮಾಡಿಕೊಳ್ಳದಿದ್ದರೆ, ನಮ್ಮಂಥ ಬುದ್ಧಿಗೇಡಿಗಳು ಯಾರೂ ಇಲ್ಲ.

**ಸಾವಿನ ನಂತರದ ವಿಷಯಗಳಿಗೆ ಸಂಪೂರ್ಣ ಅನ್ಯಮನಸ್ಕತ್ವ ತೋರುವವರಿಗೆ ನೀವು ಹೇಳುವುದೇನು? ಅಂತಹ ನಡೆ ಅದೆಷ್ಟು ಅತಾರ್ತಿಕವಾದದ್ದು ಎಂಬುದನ್ನು ಹೇಗೆ ಅರ್ಥಮಾಡಿಸುವಿರಿ?**

**ಸೋಮವಾರ** **ಡಿಸೆಂಬರ್ 21**

## ಹೊಸ ಬದುಕು

**"ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವುದಿಲ್ಲ. ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕ 27:4). ನಮ್ಮ ಇಂದಿನ ಬದುಕಿಗಿಂತ, ನಮ್ಮ ಹೊಸ ಬದುಕು ಭಿನ್ನವಾಗಿರುತ್ತದೆ ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಈ ವಾಕ್ಯ ಹೇಳುವುದೇನು?**

---

---

ಒಬ್ಬ ಕ್ರೈಸ್ತ ಮನುಷ್ಯ ತನ್ನ ಸ್ನೇಹಿತನೊಬ್ಬನೊಂದಿಗೆ ಸುವಾರ್ತೆಯ ನಿರೀಕ್ಷೆ, ಯೇಸುಕ್ರಿಸ್ತನ ಮೂಲಕ ದೊರೆಯುವ ನಿತ್ಯಜೀವವನ್ನು ಕುರಿತು ಮಾತನಾಡುತ್ತಿದ್ದನು. ಅವನ ಮಾತಿಗೆ, ಆ ಸ್ನೇಹಿತ- "ನಿತ್ಯ ಜೀವವೇ?" ಎಂದು ಭಯದಿಂದ ತತ್ತರಿಸುತ್ತಾ ಋಣಾತ್ಮಕವಾಗಿ ಪ್ರತಿಕ್ರಿಯಿಸಿ, "ಎಂತಹ ಭಯಾನಕವಾದ ಆಲೋಚನೆ! ಈ ಭೂಲೋಕದ ಮೇಲಿನ 70 ರಿಂದ 80 ವರ್ಷಗಳೇ ಅದೇಷ್ಟೋ ಕೆಟ್ಟತನಗಳಿಂದ ತುಂಬಿರುವುದು ಸಾಲದೆ. ಇದು ನಿರಂತರಕ್ಕೂ ಮುಂದುವರೆಯಬೇಕೇ? ಈ ಜೀವನ ನಿತ್ಯಕಾಲಕ್ಕೂ ಮುಂದುವರಿಯುವುದನ್ನು ಬಯಸುವವರ್ಯಾರು? ಅದು ನರಕವೇ ಸರಿ" ಎಂದನು.

ಆ ಸ್ನೇಹಿತನ ಪ್ರತಿಕ್ರಿಯೆ ಸರಿಯೇ, ಆದರೆ ನಿತ್ಯಜೀವದ ವಾಗ್ದಾನವನ್ನು

ಅವನು ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ. ಯಾಕೆಂದರೆ ನಿತ್ಯ ಜೀವನದಲ್ಲಿ ಈ ಲೋಕದ ಜೀವನ ಮುಂದುವರಿಯುವುದಿಲ್ಲ. ಅಯ್ಯೋ, ಯಾರಿಗೆ ಬೇಕು ಈ ಲೋಕದ ಜೀವನ ನಿತ್ಯಕಾಲಕ್ಕೂ? ಅದಕ್ಕೆ ಬದಲು, ಮೇಲಿನ ವಾಕ್ಯ ಹೇಳುವ ಹಾಗೆ, "ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" "ಇಗೋ ಎಲ್ಲವನ್ನೂ ಹೊಸದು ಮಾಡುತ್ತೇನೆ" ಎಂದು ಸಿಂಹಾಸನದ ಮೇಲೆ ಕೂಡಿರುವಾತನು ಹೇಳಿದ್ದಾನೆ.

**ಬರಲಿರುವ ಹೊಸ ಬದುಕನ್ನು ಕುರಿತು ಈ ಕೆಳಗಿನ ವಾಕ್ಯಗಳು ಹೇಳುವುದೇನು?**

**2 ಪೇತ್ರ 3:10–13** ______________________________

________________________________________

________________________________________

ಪ್ರಕಟನೆ 21:1–6 ______________________________

________________________________________

________________________________________

**ಇಲ್ಲಿನ ಮುಖ್ಯ ಪ್ರಶ್ನೆ: ಈ ಬದುಕಿನ ಒಂದು ಭಾಗವಾಗಲಿಕ್ಕೆ ನಾವೇನು ಮಾಡಬೇಕು? ಅಲ್ಲಿಗೆ ಹೇಗೆ ಹೋಗೋಣ? ಆ ಹೊಸ ಬದುಕಿನ ಒಂದು ಭಾಗವಾಗುವುದನ್ನು ಖಚಿತಪಡಿಸಿಕೊಳ್ಳುವುದು ಹೇಗೆ? ಯೇಸುಕ್ರಿಸ್ತನ ಮೂಲಕ, ದೇವರು ವಾಗ್ದಾನ ಮಾಡಿದ, ಆ ಹೊಸ ಬದುಕಿನ ಭಾಗವಾಗುವುದಕ್ಕೆ ಅಡ್ಡಿ ಮಾಡುತ್ತಿರುವ ನಿಮ್ಮ ಜೀವನದ ಕೆಲಸಗಳಾವುವು?**

**ಮಂಗಳವಾರ** **ಡಿಸೆಂಬರ್ 22**

## ನಂತರ ನಮಗೆ ಗೊತ್ತಾಗುವುದು

**"ಪರಲೋಕ ಒಂದು ಶಾಲೆ; ಅದರ ಪಠ್ಯವಸ್ತು: ವಿಶ್ವ: ಅದರ ಶಿಕ್ಷಕ: ಅಮರತ್ವವುಳ್ಳವನು. ಈ ಶಾಲೆಯ ಮತ್ತೊಂದು ಶಾಖೆ ಏದೆನ್ ತೋಟದಲ್ಲಿ ಸಂಸ್ಥಾಪಿಸಲ್ಪಟ್ಟಿತು; ಮತ್ತು ವಿಮೋಚನೆಯ ಯೋಜನೆ ಯಶಸ್ವಿಯಾಯಿತು. ಏದೆನ್ ತೋಟದಲ್ಲಿ ಶಿಕ್ಷಣ ಮತ್ತೆ ಆರಂಭವಾಗಲಿದೆ."** ಎಲೆನ್ ಜಿ ವೈಟ್, ಎಜುಕೇಷನ್, ಪುಟ 306.

ನೀವು ಎಲ್ಲರಂತೆ ಒಬ್ಬರಾದರೆ, ನಿಮಗೂ ಕೇಳುವುದಕ್ಕೆ ಬಹಳ ಪ್ರಶ್ನೆಗಳಿರಬಹುದು. ಅವು ಪಾಪ, ಸಂಕಟ, ವ್ಯಾಧಿ, ಮರಣ, ಇದು ಏಕೆ ಹೀಗಾಯಿತು, ಅದು ಏಕೆ ಹಾಗಾಯಿತು, ಮತ್ತೊಂದು ಹೀಗೇಕಾಯಿತು ಎಂಬ ಪ್ರಶ್ನೆಗಳಾಗಿರಬಹುದು.

ನಿಸರ್ಗ ಪ್ರಪಂಚ ಕುರಿತ ಪ್ರಶ್ನೆಗಳು; ನಿಸರ್ಗದ ರಹಸ್ಯಗಳ ಕುರಿತ ಪ್ರಶ್ನೆಗಳೂ ಇದ್ದುಕೊಂಡೇ ಬಂದಿವೆ. ಈ ಪ್ರಪಂಚವನ್ನು ಅಷ್ಟೇ ಏಕೆ ಇಡೀ ವಿಶ್ವವನ್ನು ಹೆಚ್ಚಾಗಿ ಅರ್ಥಮಾಡಿಕೊಳ್ಳಲು ವಿಜ್ಞಾನದ ಪ್ರಗತಿ ಬಹಳಷ್ಟು ಸಹಾಯ ಮಾಡಿದೆ; ಆದರೂ, ಇನ್ನೂ ನಮ್ಮ ಗ್ರಹಿಕೆಯನ್ನು ಮೀರಿದ, ವಿಜ್ಞಾನ ಅನ್ವೇಷಣೆ ಮಾಡಲಾಗದ ರಹಸ್ಯಗಳು ಇದ್ದಾವೆ.

ಸರಳ ಜೀವಿಗಳಿಂದ ಹಿಡಿದು, ನಮ್ಮ ತಲೆಯ ಮೇಲಿರುವ ಆಕಾಶದೆತ್ತರದವರೆಗೂ, ಉಪಪರಮಾಣುವಿನಿಂದ ಹಿಡಿದು, ಆಕಾಶದಲ್ಲಿ ಹರಡಿಕೊಂಡು ಸುರುಳಿಸುತ್ತುವ ನಕ್ಷತ್ರಗಳ ಸಮೂಹಗಳವರೆಗೂ, ನಾವು ವಾಸ್ತವತೆಯನ್ನು ಎದುರಿಸುತ್ತೇವೆ, ಆ ವಾಸ್ತವ ನಮ್ಮ ಮನಸ್ಸಿಗಿಂತಲೂ ಬಹು ದೊಡ್ಡದು ಮತ್ತು ಆಳವಾದದ್ದು, ಹೀಗಾಗಿ ಅದನ್ನು ನಮ್ಮಿಂದ ಗ್ರಹಿಸಲಾಗದು. ಅದರಲ್ಲೂ ವಿಶೇಷವಾಗಿ ಈ ಲೋಕದಲ್ಲಿ ನಮಗಿರುವ ಸಮಯವೋ ಅಲ್ಪವಾದದ್ದು ಮತ್ತು ನಮ್ಮಷ್ಟಕ್ಕೆ ನಾವೇ ಅಧ್ಯಯನ ಮಾಡಿ ಅರಿಯಲೂ ಆಗದು.

ಇನ್ನೊಂದು ಅನುಕೂಲವೇನೆಂದರೆ, ನಾವು ಪರಲೋಕದಲ್ಲಿ ನಿತ್ಯಕಾಲಕ್ಕೂ ಅಧ್ಯಯನ ಮಾಡಲಿರುವುದರಿಂದ, ಬಹಳಷ್ಟು ರಹಸ್ಯಗಳನ್ನು ವಿಶ್ಲೇಷಿಸಿ ನೋಡಬಹುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

**ಒಮ್ಮೆಗೆ ಈ ಪಾಪ ಮತ್ತು ಸಂಕಟ ಹಾಗು ಮರಣದ ಶೋಕ ಕಥೆ ಕೊನೆಗೂ ಮುಕ್ತಾಯಗೊಂಡಾಗ, ನಾವು ಈ ಕಥೆಯಿಂದ ಕಲಿಯಬೇಕಾದ್ದೇನು ಎಂಬುದನ್ನು ಕುರಿತು ಈ ಕೆಳಗಿನ ವಾಕ್ಯಗಳು ಹೇಳುವುದೇನು?**

1 ಕೊರಿಂಥ 13:12 ______________________________

______________________________

1 ಕೊರಿಂಥ 4:5 ____________________

____________________

ನಮ್ಮಿಂದ ಈಗ ಮರೆಮಾಡಲಾಗಿರುವುಗಳನ್ನು ಕುರಿತು ನಮಗೆ ಅರ್ಥವಿವರಣೆ ಕೊಡಲಾಗುವುದೆಂದು, ವಾಗ್ದಾನ ಮಾಡಲಾಗಿದೆ. ಎಂತಹ ಆಶ್ಚರ್ಯಕರ ನಿರೀಕ್ಷೆ! ಯಾವುದನ್ನು ಅರ್ಥಮಾಡಿಕೊಳ್ಳುವುದು ಜಟಿಲ, ಒಗಟು, ಬಿಡಿಸಲಾಗದ ಕಗ್ಗಂಟು ಎಂದುಕೊಂಡಿದ್ದೆವು, ಅದು ಅರ್ಥವಾದಾಗ, ನಾವು ದೇವರನ್ನು ಸ್ತುತಿಸುವುದು ಮತ್ತು ಸ್ತೋತ್ರಿಸುವುದನ್ನು ಬಿಟ್ಟು ಬೇರೇನೂ ಮಾಡಲಾಗದು! ನಮಗಿರುವ ಒಂದೇ ಮಾರ್ಗ: ನಮ್ಮ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳೋಣ. ದೇವರ ವಾಗ್ದಾನಗಳಲ್ಲಿ ಭರವಸೆಯಿಡೋಣ. ದೇವರು ಇಂದು ಜೀವಿಸಲು ಎಷ್ಟು ಸತ್ಯಕೊಟ್ಟಿದ್ದಾನೋ ಅದಕ್ಕೆ ಅಂಟಿಕೊಂಡು ಬಾಳೋಣ. ಅಂತ್ಯ ಬರುವವರೆಗೆ ತಾಳ್ಮೆ–ಸಹನೆಯಿಂದ ನಡೆದುಕೊಳ್ಳೋಣ. ಇಲ್ಲಿ ನಮಗಿರುವ ಸುಸಂದೇಶ: "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಫಿಲಿಪ್ಪಿ 4:13.

**ಯಾವ ಜಟಿಲವಾದ ಪ್ರಶ್ನೆಗಳು ನಿಮ್ಮ ಮನಸ್ಸನ್ನು ಬಾಧಿಸುತ್ತಿವೆ? ಯಾವ ಯಾವ ಸಂಗತಿಗಳನ್ನು ಈಗ ಗ್ರಹಿಸಲಾಗುತ್ತಿಲ್ಲ? ನೀವು ಅರ್ಥಮಾಡಿಕೊಳ್ಳುವ ವಿಷಯಗಳ ಮೇಲೆ ದೇವರನ್ನು ನಂಬಲು ಕಲಿಯುವುದು, ಮುಂದೆ ಅದೇ ನಂಬಿಕೆ ಈಗ ಅರ್ಥವಾಗದಿರುವ ವಿಷಯಗಳನ್ನು ಮುಂದೆ ಅರ್ಥಮಾಡಿಸಲು ಸಹಾಯ ಮಾಡುತ್ತದೆ ಎಂದು ಗ್ರಹಿಸುವುದು ಹೇಗೆ?**

**ಬುಧವಾರ** **ಡಿಸೆಂಬರ್ 23**

## ಪರಲೋಕದ ಶಾಲೆ

**"ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ. ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದ್ದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವುದು; ಕಾಣದಿರುವಂಥದು ಸದಾಕಾಲವೂ ಇರುವುದು"** (2 ಕೊರಿಂಥ 4:17–19).

**ಈ ಕೆಳಗಿನ ವಾಕ್ಯಗಳು ಯಾವ ನಿರೀಕ್ಷೆಯನ್ನು ನಮಗೆ ಕೊಡುತ್ತದೆ? ಯೇಸು ಕ್ರಿಸ್ತನಿಂದ ನಮಗೆ ವಾಗ್ದಾನ ಮಾಡಲ್ಪಟ್ಟ, ನಾವು ಕಾಯುತ್ತಿರುವಂತಹ: "ಕಾಣದಿರುವಂಥದು ಸದಾಕಾಲವೂ ಇರುವುದು" ಎಂದರೆ ಅವು ಯಾವುವು?** ಪ್ರಕ 2:1,2; ಪ್ರಕ 2:7; ಪ್ರಕ 7:14–17ನ್ನೂ ಸಹ ಓದಿಕೊಳ್ಳಿರಿ.

________________________________________

________________________________________

ಕ್ರಿಸ್ತನಲ್ಲಿ ನಮಗೆ ಕೊಡಲು ಒಪ್ಪಿರುವ ವಾಗ್ದಾನಗಳು ಎಷ್ಟೇ ವಾಸ್ತವವಾದದ್ದಾಗಿದ್ದರೂ, ಅವುಗಳಲ್ಲಿ ನಂಬಿಕೆಯಿಡಲು ಅದೆಷ್ಟೇ ಸಕಾರಣಗಳನ್ನು ನೀಡಿದ್ದರೂ, ನಮಗೆ ಏನು ಕಾದಿದೆಯೋ ಅದಕ್ಕೆ ಬೇಕಾಗಿರುವ ಸುಳಿವುಗಳನ್ನೂ, ಇಂಗಿತಗಳನ್ನೂ, ಸತ್ಯವೇದ ಕೊಟ್ಟಿರುವದಂತೂ ನಿಜವೇ ಸರಿ. ಖಚಿತವಾಗಿ ಹೇಳಬಹುದಾದ ಒಂದು ವಿಷಯವೆಂದರೆ: ಅದು ಶ್ರೇಷ್ಠತಮವಾದದ್ದು! ಯಾಕೆಂದರೆ ಪಾಪದ ಹಾವಳಿಯಿಲ್ಲದಿರುವ ಆ ಬದುಕು ಅದೆಷ್ಟು ಆನಂದಮಯವಾಗಿಯೂ ಮತ್ತು ಪರಿಶುದ್ಧವಾಗಿಯೂ ಇರುತ್ತದೆ ಎಂಬುದನ್ನು ಸ್ವಲ್ಪ ಹೊತ್ತು ಚಿಂತನೆ ಮಾಡಿನೋಡಿರಿ.

ನಮ್ಮೆಲ್ಲ ನೋವು, ನಮ್ಮೆಲ್ಲ ಸಂಕಟ, ನಮ್ಮೆಲ್ಲ ಪ್ರಯಾಸಗಳಿಗೆ ಕಾರಣ. ಪಾಪ ಮತ್ತು ಪಾಪದ ಪರಿಣಾಮ. ಇವೆಲ್ಲವನ್ನು ಇಲ್ಲದಂತಾಗಿಸಲು ಯೇಸುಕ್ರಿಸ್ತನು ಧರೆಗಿಳಿದು ಬಂದನು. ಪಾಪದ ಆಗಮನಕ್ಕಿಂತ ಮುನ್ನ ದೇವರು ಆದಿಯಲ್ಲಿ ಈ ಭೂಮಿ ಹೇಗಿರಬೇಕೆಂದು ಅಂದುಕೊಂಡಿದ್ದನೋ ಆ ಹಿಂದಿನ ಸ್ಥಿತಿಗೆ ಭೂಮಿಯನ್ನು ತರುವ ಕೆಲಸವನ್ನು ಕ್ರಿಸ್ತನು ಮಾಡುವನು. ಅದಕ್ಕಿಂತಲೂ ಉತ್ತಮವಾದದ್ದನ್ನು ಆತ ನಿರ್ಮಿಸಲು ಶಕ್ತನು. ಯಾಕೆಂದರೆ ಈ ಎಲ್ಲದರ ಮಹಿಮೋತ್ಸವದ ನಡುವೆಯೂ, ನಮ್ಮ ಈ ಉತ್ಸವಕ್ಕೆ, ನಮ್ಮ ಬಿಡುಗಡೆಗೆ, ಕಾರಣವಾದ ಕ್ರಿಸ್ತನ ಹಸ್ತಗಳಲ್ಲಿಯೂ ಮತ್ತು ಪಾದಗಳಲ್ಲಿಯೂ ಮೂಡಿರುವ ಮೊಳೆಯ ಕಲೆಗಳನ್ನು ದೃಷ್ಟಿಸಿ ನೋಡುತ್ತೇವೆ. ನಮ್ಮ ವಿಮೋಚನೆಗೆ ಆತ ತೆತ್ತ ಬೆಲೆಯಿದು.

ನಮ್ಮ ದೃಷ್ಟಿಯನ್ನು ಕತ್ತಲಾಗಿಸುತ್ತಿರುವ ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ಕಿತ್ತು ಬೀಸಾಡಿದಾಗ, ದೇವನಗರಿಯ ಸೌಂದರ್ಯವನ್ನು ಕಾಣುವೆವು. ಅದರ ಸುಳಿವನ್ನು

ಈಗ ಸೂಕ್ಷ್ಮದರ್ಶಕದಲ್ಲಿ ಕಾಣುವಂತೆ ಕಾಣುತ್ತಿದ್ದೇವೆ. ದೂರದರ್ಶಕದಲ್ಲಿ (ಟೆಲಿಸ್ಕೋಪ್‌ನಲ್ಲಿ) ದೂರದ ವಸ್ತುಗಳನ್ನು ನೋಡುವಂತೆ ಈವತ್ತು ನಾವು ಪರಲೋಕವನ್ನು ಬಹುದೂರದಿಂದ ನೋಡುತ್ತಿದ್ದೇವೆ. ಯಾವಾಗ, ಪಾಪದ ಕೇಡನ್ನು ಸಂಪೂರ್ಣವಾಗಿ ತೆಗೆದುಹಾಕಲಾಗುತ್ತದೋ, ಆಗ ಇಡೀ ಭೂಮಿಯು "ನಮ್ಮ ದೇವರಾದ ಕರ್ತನ ಸೌಂದರ್ಯ"ವೋ ಎಂಬಂತೆ ಕಾಣುವುದು. ನಮ್ಮ ಅಧ್ಯಯನಕ್ಕೆ ಎಂತಹ ಒಂದು ಕ್ಷೇತ್ರವೇ ತೆರೆದುಕೊಳ್ಳುತ್ತಿದೆ! ಅಲ್ಲಿ ವಿಜ್ಞಾನದ ವಿದ್ಯಾರ್ಥಿಗಳು ಸೃಷ್ಟಿಯ ದಾಖಲೆಗಳನ್ನು ಓದಬಹುದು. ದುಷ್ಟತನದ ನಿಯಮಗಳನ್ನು ಜ್ಞಾಪಿಸಿಕೊಳ್ಳಬೇಕಿಲ್ಲ. ಅಲ್ಲಿ ಪ್ರಕೃತಿಯ ಧ್ವನಿಗಳಲ್ಲಿ ಮೂಡಿರುವ ಸುಮಧುರ ಸಂಗೀತವನ್ನು ಕೇಳಿಸಿಕೊಳ್ಳಬಹುದು. ಅಲ್ಲೆಲ್ಲೂ ಪ್ರಲಾಪದ ಗೋಳಾಟವಾಗಲಿ ಅಥವಾ ಅಳುವಿನ ಸಣ್ಣದನಿಯಾಗಲಿ ಕೇಳಿಬರುವುದಿಲ್ಲ. ಸೃಷ್ಟಿಯ ಎಲ್ಲ ವಸ್ತುಗಳಲ್ಲಿ ಒಂದು ಕೈಬರಹವನ್ನು ಗುರುತಿಸಬಹುದು. 'ದೇವರ ನಾಮ ದೊಡ್ಡದಾಗಿ ಬರೆಯಿರಿ'. ಇಡೀ ವಿಶ್ವ ಅದನ್ನು ನೋಡಲಿ. ಭೂಮಿಯಲ್ಲಾಗಲಿ ಅಥವಾ ಸಮುದ್ರದಲ್ಲಾಗಲಿ ಅಥವಾ ಆಕಾಶದಲ್ಲಾಗಲಿ ಒಂದೇ ಒಂದು ಕೇಡಿನ ಗುರುತಾಗಲಿ ಅಲ್ಲಿ ಇರುವುದಿಲ್ಲ. ಎಲೆನ್ ಜಿ ವೈಟ್, ಎಜುಕೇಷನ್, ಪುಟ 303.

**ಸಂಪೂರ್ಣವಾಗಿ ಹೊಸದಾದ ಪ್ರಪಂಚವೊಂದರಲ್ಲಿ ಎಂದೆಂದೂ ಬಾಳುವೆ ನಡೆಸಬೇಕಾದ ಚಿತ್ರಣವನ್ನು ಕಲ್ಪಿಸಿ ನೋಡಿ. ಅಲ್ಲಿಗೆ ಹೋಗದಿದ್ದರೆ, ಇಲ್ಲಿಗೆ ಜೀವನ ಬಲು ಕಷ್ಟವಾಗಬಹುದು. ಈ ವಿಷಯದಲ್ಲಿ ನಿಮ್ಮ ಕಲ್ಪನೆಯೇನು? ಭವಿಷ್ಯವನ್ನು ಕುರಿತು ನಿಮ್ಮ ನಿರ್ದಿಷ್ಟ ನಿಲುವೇನು?**

**ಗುರುವಾರ** **ಡಿಸೆಂಬರ್ 24**

## ಮಹಾನ್ ಶಿಕ್ಷಕ

ಈ ಇಡೀ ತ್ರೈಮಾಸಿಕದಲ್ಲಿ ನಾವು ನೋಡಿದ ಹಾಗೆ, ಕ್ರಿಸ್ತನ ದೇವರ ಸೇವೆಯ ಒಂದು ಕೇಂದ್ರ ಬಿಂದು: ಭೂಮಿಯ ಮೇಲೆ ಆತನ ಶಿಕ್ಷಕನ ಪಾತ್ರ, ತನ್ನ ಸೇವೆ ಆರಂಭವಾದ ಕಾಲದಿಂದ, ನಡೆಯಿಂದ ಅಥವಾ ಕ್ರಿಯೆಯಿಂದ ಆತ ತನ್ನ ಹಿಂಬಾಲಕರುಗಳಿಗೆ ಸತತವಾಗಿ ಆತನು ತನ್ನ ಬಗ್ಗೆಯೂ, ತನ್ನ ತಂದೆಯ ಬಗ್ಗೆಯೂ, ರಕ್ಷಣೆಯ ಬಗ್ಗೆಯೂ ಮತ್ತು ಭಾಗ್ಯಕರ ನಿರೀಕ್ಷೆಯ

ಬಗ್ಗೆಯೂ ಬೋಧಿಸುತ್ತಲೇ ಇದ್ದನು (ಮತ್ತಾಯ 5:2; ಮಾರ್ಕ 4:2; ಲೂಕ 19:47; ಯೋಹಾನ 6:59ನ್ನೂ ಓದಿಕೊಳ್ಳಿರಿ).

ನೀವು ಮಾಡಬೇಕಾದದ್ದಿಷ್ಟೇ. ಯಾವುದಾದರೂ ಒಂದು ಸುವಾರ್ತೆಯ ಪುಸ್ತಕದ ಮೇಲೆ, ಒಂದು ಪಕ್ಷಿನೋಟ ಬೀರಿರಿ. ಪುಸ್ತಕದುದ್ದಕ್ಕೂ ಯೇಸುಕ್ರಿಸ್ತನ ಬೋಧನೆಯನ್ನು ಕಾಣುವಿರಿ. ಈಗಲು ಅಷ್ಟೇ, ಆತನ ವಾಕ್ಯದ ಮೂಲಕ ನಮಗೆ ಬೋಧನೆಯನ್ನು ಮುಂದುವರಿಸಿದ್ದಾನೆ, ಮತ್ತು ನೂತನ ಭೂಮಿಯಲ್ಲೂ ಆತ ಈ ಬೋಧನೆಯನ್ನು ಮುಂದುವರಿಲಿಕ್ಕಿದ್ದಾನೆ. ಪಾಪದ ಭಾರ ಮತ್ತು ಅದು ಒಡ್ಡುವ ದೌರ್ಬಲ್ಯಗಳಿಲ್ಲದ ಭೂಮಿಯಲ್ಲಿ ನಡೆಯುವ ಬೋಧನೆ ಎಷ್ಟು ಭಿನ್ನವಾಗಿರಬಹುದು ಎಂಬುದನ್ನು ಕಲ್ಪನೆ ಮಾಡಿನೋಡಿ.

**"ಮತ್ತೊಬ್ಬನು ಅವನನ್ನು ನಿನ್ನ ಎದೆಯ ಮೇಲಿನ ಈ ಗಾಯಗಳೇನು ಎಂದು ಕೇಳಿದರೆ ಅವನು– ಮಿತ್ರರ ಮನೆಯಲ್ಲಿ ನನಗಾದ ಗಾಯಗಳು ಎಂದುತ್ತರ ಕೊಡುವನು"** – (ಜೆಕರ್ಯ 13:6).

**ಈ ವಾಕ್ಯ ಏನನ್ನು ಕುರಿತು ಮಾತನಾಡುತ್ತಿದೆ ಎಂಬುದು ನಿಮ್ಮ ಅಂಬೋಣ?**

________________________________________

________________________________________

ನಿತ್ಯಜೀವದ ಕಾಲಚಕ್ರ ಉರುಳುತ್ತಾ ಹೋಗುತ್ತಿದ್ದಂತೆ, ದೇವರ ಮತ್ತು ಕ್ರಿಸ್ತನ ಕುರಿತ ಜ್ಞಾನ ಹೆಚ್ಚು ಸಂಪದ್ಭರಿತವಾಗಿಯೂ ಮತ್ತು ಮಹಿಮಾಭರಿತವಾಗಿಯೂ ಕೂಡಿರುತ್ತದೆ. ಜ್ಞಾನಾರ್ಜನೆ ಪ್ರಗತಿ ಪಥದಲ್ಲಿರುವಾಗ ಅದಕ್ಕೆ ಅನುರೂಪವಾಗಿ ಪ್ರೀತಿ, ಭಕ್ತಿ ಮತ್ತು ಸಂತೋಷವೂ ವರ್ಧಿಸುತ್ತದೆ. ಹೆಚ್ಚು ಜನ ದೇವರ ಬಗ್ಗೆ ಕಲಿತಷ್ಟೂ, ಆತನ ಚಾರಿತ್ರ್ಯದ ಕೊಂಡಾಡುವಿಕೆಯು ಘನವಾಗಿರುತ್ತದೆ. ಯೇಸುಕ್ರಿಸ್ತನು ವಿಮುಕ್ತತೆಯ ಶ್ರೀಮಂತಿಕೆಯನ್ನು ಮತ್ತು ಸೈತಾನನೊಂದಿಗಿನ ಮಹಾಹೋರಾಟದಲ್ಲಿ ಗಳಿಸಿದ ವಿಸ್ಮಯಕಾರಿ ಸಾಧನೆಯನ್ನು ಅವರ ಮುಂದೆ ತೆರೆದಿಡುವನು. ವಿಮೋಚನೆಗೊಂಡವರು ರೋಮಾಂಚನಗೊಂಡು ಉತ್ಸಾಹದಿಂದ ದೇವಾರಾಧನೆ ಮಾಡುವರು. ಹೆಚ್ಚು ಉತ್ಸಾಹದಿಂದ ಅವರು ಚಿನ್ನದ ವೀಣೆಯನ್ನು ನುಡಿಸುವರು. ಹತ್ತುಸಾವಿರ ಬಾರಿ ಹತ್ತು ಸಾವಿರ ಮತ್ತು

ಸಾವಿರ– ಸಾವಿರಾರು ಧ್ವನಿಗಳು ದೇವರ ಸ್ತುತಿಸ್ತೋತ್ರದ ಮೇಳಗೀತ ಹಾಡಲು ತಮ್ಮ ಧ್ವನಿಗೂಡಿಸುವವು.

"ಮಹಾಹೋರಾಟ ಮುಗಿಯಿತು. ಪಾಪ ಮತ್ತು ಪಾಪಿಗಳು ಇನ್ನಿಲ್ಲ. ಇಡೀ ವಿಶ್ವವೇ ಪರಿಶುದ್ಧವಾಯಿತು. ಸಾಮರಸ್ಯ ಮತ್ತು ಸಂತೋಷದ ಒಂದು ನಾಡಿಬಡಿತ ವಿಶಾಲ ಸೃಷ್ಟಿಯ ಉದ್ದಕ್ಕೂ ಬಡಿದುಕೊಳ್ಳುತ್ತಿದೆ. ಎಲ್ಲವನ್ನೂ ಸೃಷ್ಟಿಸಿದಾತನಿಂದ, ಮೇರೆಯಿಲ್ಲದ ಸಾಮ್ರಾಜ್ಯದೆಲ್ಲೆಡೆ ಜೀವ ಮತ್ತು ಬೆಳಕು ಮತ್ತು ಸಂತೋಷ ಹರಿಯುತ್ತಿದೆ. ಅತ್ಯಲ್ಪ ಪರಮಾಣುವಿನಿಂದ ಶ್ರೇಷ್ಠ ಪ್ರಪಂಚದವರೆಗೆ, ಎಲ್ಲಾ ಸಜೀವ ಮತ್ತು ನಿರ್ಜೀವ ವಸ್ತುಗಳು ಮುಸುಕಾದ ಸೌಂದರ್ಯ ಮತ್ತು ಪರಿಪೂರ್ಣ ಸಂತೋಷದಿಂದ ದೇವರು ಪ್ರೀತಿ ಎಂದು ಘೋಷಿಸುತ್ತಿದೆ" – ಎಲೆನ್ ಜಿ ವೈಟ್, ದಿ ಗ್ರೇಟ್ ಕಾಂಟ್ರೊವರ್ಸಿ, ಪುಟ 678.

**ನಿತ್ಯಕಾಲದುದ್ದಕ್ಕೂ ನಾವು ಕಲಿಯುವ ಸತ್ಯಗಳಲ್ಲಿಯೇ, ನಮಗಾಗಿ ತನ್ನನ್ನೇ ಯೇಸು ಯಜ್ಞದ ಕುರಿಯೋಪಾದಿಯಲ್ಲಿ ಸಜೀವ ಬಲಿಯರ್ಪಣೆ ಮಾಡಿಕೊಂಡ ಸತ್ಯದಷ್ಟು ಬೇರಾವ ಸತ್ಯವು ನಮ್ಮನ್ನು ಒಲಿಸಿಕೊಳ್ಳಲಾಗದು. ಈ ವಿಷಯ ಅದೆಷ್ಟು ಆಳವು ಮತ್ತು ಸಂಪದ್ಭರಿತವಾದದ್ದು ಎಂದರೆ, ಈ ವಿಷಯವನ್ನು ನಿತ್ಯಕಾಲಕ್ಕೂ ಅಧ್ಯಯನ ಮಾಡಲಿದ್ದೇವೆ. ಶಿಲುಬೆಯ ಮೂಲಕ ಯೇಸು ನಮಗೇನು ಮಾಡಿದನೋ ಅದಕ್ಕೆ ಮೆಚ್ಚಿಕೆ ಸೂಚಿಸುವುದನ್ನು ಕಲಿಯುವುದು ಹೇಗೆ?**

**ಶುಕ್ರವಾರ** **ಡಿಸೆಂಬರ್ 25**

**ಹೆಚ್ಚಿನ ಚಿಂತನೆ :** "ಎಲೆನ್ ಜಿ ವೈಟ್‌ರವರ ಎಜುಕೇಷನ್ ಪುಸ್ತಕದಿಂದ, "ದಿ ಸ್ಕೂಲ್ ಆಫ್ ದಿ ಈಯರ್‌ಆಫ್ಟರ್" ಎಂಬ ಅಧ್ಯಾಯವನ್ನು, ಪುಟ 301–309ರವರೆಗೆ ಓದಿಕೊಳ್ಳಿರಿ ಮತ್ತು ದಿ ಗ್ರೇಟ್ ಕಾಂಟ್ರೋವರ್ಸಿಯ ಪುಸ್ತಕದ ಪುಟ 662 ರಿಂದ 678ರಲ್ಲಿರುವ "ದಿ ಕಾಂಟ್ರೊವರ್ಸಿ ಎಂಡೆಡ್" ಎಂಬ ಅಧ್ಯಾಯವನ್ನು ಓದಿಕೊಳ್ಳಿರಿ.

"ನಾವಿಂದು ಈ ಲೋಕದಲ್ಲಿ ಯಾವ ಸಿಂಹವನ್ನು ಕಂಡು ಭಯಭೀತರಾಗುತ್ತೇವೆಯೋ ಮತ್ತು ದಿಗಿಲು ಬೀಳುತ್ತೇವೆಯೋ, ಅದೇ ಸಿಂಹ ನೂತನ ಭೂಮಿಯಲ್ಲಿ ಕುರಿಯೊಂದಿಗೆ ಮಲಗುತ್ತದೆ. ಅಲ್ಲಿ ಶಾಂತಿ–ಸಮಾಧಾನ

ಮತ್ತು ಸಾಮರಸ್ಯವಿರುತ್ತದೆ. ನೂತನ ಭೂಮಿಯ ಮೇಲಿನ ಮರಗಳು ನೇರವಾಗಿ, ಎತ್ತರವಾಗಿ ಮತ್ತು ವಿಶಾಲವಾಗಿ ಬೆಳೆದು ನಿಂತಿರುತ್ತವೆ...".

"ನಮ್ಮ ಭೂಮಿಯ ಮೇಲಿನ ಮನೆಯ ಸೌಂದರ್ಯವೆಲ್ಲವೂ, ಸ್ಫಟಿಕ ಸ್ಪಷ್ಟವಾದ ನದಿ ನೀರನ್ನೂ ಮತ್ತು ಹಸಿರು ಹೊಲಗಳನ್ನೂ, ತೂಗಾಡುವ ಮರಗಳನ್ನೂ ಮತ್ತು ಜೀವಂತ ನೀರಿನ ಬುಗ್ಗೆಗಳನ್ನೂ, ಹೊಳೆಯುವ ನಗರಗಳನ್ನೂ ಮತ್ತು ಬಿಳಿಯ ನಿಲುವಂಗಿ ಉಟ್ಟುಕೊಂಡ ಹಾಡುಗಾರರು ನಮ್ಮ ಪರಲೋಕದ ಮನೆಯ ನೆನಪು ಕೊಡುತ್ತವೆ. ಪರಲೋಕದ ಸೌಂದರ್ಯವನ್ನು ಎಂತಹ ಲೋಕಪ್ರಸಿದ್ಧಿ ಕಲೆಗಾರನಿಂದ ಚಿತ್ರಿಸಲಾಗದು ಮತ್ತು ಯಾವ ಲೋಕಪ್ರಸಿದ್ಧಿ ವಾಗ್ಮಿಯಿಂದಲೂ ವರ್ಣಿಸಲಾಗದು. ರಕ್ಷಿಸಲ್ಪಟ್ಟವರ ಮನೆಯನ್ನು ನಿಮ್ಮ ಕಲ್ಪನಾಶಕ್ತಿಯನ್ನೆಲ್ಲಾ ಉಪಯೋಗಿಸಿಕೊಂಡು ಚಿತ್ರಿಸಿಕೊಳ್ಳಿರಿ. ನಿಮ್ಮ ಅತ್ಯಂತ ಪ್ರಕಾಶಮಾನ ಕಲ್ಪನೆಯನ್ನು ಮೀರಿದ ಮಹಿಮಾಭರಿತ ಲೋಕವದು" – ಎಲೆನ್ ಜಿ ವೈಟ್, ಹೆವನ್, ಪುಟ 133, 134.

"ಭವಿಷ್ಯದ ಭಾಗ್ಯತೆಯನ್ನು ತುಂಬಾ ಪ್ರಾಪಂಚಿಕ ಎಂದು ತೋರುವ ಭಯವು ಅನೇಕರು ಸತ್ಯಗಳನ್ನು ಆಧ್ಯಾತ್ಮಿಕಗೊಳಿಸಲು ಕಾರಣವಾಯಿತು. ಅಂತಹ ಆಧ್ಯಾತ್ಮಿಕತೆ ಪರಲೋಕವನ್ನು ನಮ್ಮ ಮನೆಯಂತೆ ನೋಡಲು ಸಹಾಯ ಮಾಡಿತು. ಕ್ರಿಸ್ತನು ತಾನು ತನ್ನ ತಂದೆಯ ಮನೆಗೆ ಹಿಂತಿರುಗಿ, ಅವರಿಗೆ ಬಿಡಾರಗಳನ್ನು ಸಿದ್ಧಮಾಡುವ ಭರವಸೆಯನ್ನು ಕೊಟ್ಟಿದ್ದಾನೆ. ದೇವರ ವಾಕ್ಯಗಳ ಬೋಧನೆಯನ್ನು ಅಂಗೀಕಾರ ಮಾಡಿಕೊಂಡವರು ಖಂಡಿತವಾಗಿಯೂ ಪರಲೋಕ ವಾಸಸ್ಥಾನದ ಬಗ್ಗೆ ಅಜ್ಞಾನಿಗಳಾಗಿರಲು ಸಾಧ್ಯವಿಲ್ಲ... ನೀತಿವಂತನಿಗೆ ಸಿಗುವ ಪ್ರತಿಫಲವನ್ನು ವರ್ಣಿಸಲು ಮಾನವನ ಭಾಷೆಗಳಿಂದ ಸಾಧ್ಯವಾಗದು. ಆದರೆ ಆ ನೀತಿವಂತರಿಗೆ ಅದು ಸಾಧ್ಯವಾಗುವುದು. ಪರದೈಸಿಯಲ್ಲಿರುವ ದೇವರ ಮಹಿಮೆಯನ್ನು ಸೀಮಿತ ಜ್ಞಾನವುಳ್ಳ ಮನುಷ್ಯನಿಂದ ಗ್ರಹಿಸಲಾಗದು"– ಎಲೆನ್ ಜಿ ವೈಟ್, ದಿ ಗ್ರೇಟ್ ಕಾಂಟ್ರೊವರ್ಸಿ, ಪುಟ 674, 675.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಿತ್ಯತ್ವದ ಆಶೀರ್ವಾದದ ಬಗ್ಗೆ ವಿವೇಚನಾರಹಿತವಾದ ಜನರ ವಿಷಯದಲ್ಲಿ

ಪ್ಯಾಸ್ಕಲಿನ ಚಿಂತನೆಯನ್ನು ಕುರಿತು ಆಲೋಚನೆ ಮಾಡಿರಿ. ಜನ ಏಕೆ ಹೀಗಿದ್ದಾರೆ ಎಂಬುದಕ್ಕೆ ನಿಮ್ಮ ಆಲೋಚನೆ ಏನು? ಇದೊಂದು ವಿಚಾರಹೀನ ಮನೋವೃತ್ತಿಯಾಗುವುದೇಕೆ?

2. ನಮ್ಮ ನಂಬಿಕೆಗೆ ನಿತ್ಯಜೀವದ ನಿರೀಕ್ಷೆ ಬಹಳ ಮುಖ್ಯ ಎಂಬ ವಿಷಯವಾಗಿ ಚಿಂತನ–ಮಂಥನ ನಡೆಸಿರಿ. ಇದಿಲ್ಲದಿದ್ದರೆ, ಏನೂ ಇಲ್ಲ ಎನಿಸುವುದೇಕೆ?

3. ನೈಸರ್ಗಿಕ ಪ್ರಪಂಚದಲ್ಲಿ ಅಸ್ತಿತ್ವದಲ್ಲಿರುವ ನಂಬಲಾಗದ ವಿಸ್ಮಯಗಳನ್ನು ಕುರಿತು ಚಿಂತನೆ ನಡೆಸಿರಿ. ಜೀವಶಾಸ್ತ್ರ, ಭೂಗೋಳ ಶಾಸ್ತ್ರ, ಖಗೋಳ ಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಮುಂತಾದ ಅನೇಕ ಶಾಸ್ತ್ರಗಳಲ್ಲಿ ಜನ ಮೊದಲನೆ ಉದಾಹರಣೆಗೆ ವಿಜ್ಞಾನಿಗಳು, "ಸರಳ ಜೀವ ರೂಪಗಳ" ಕುರಿತು ಇಂದುಮಾತನಾಡುವುದೇ ಇಲ್ಲ. ಯಾಕೆಂದರೆ ಈಗ ಸರಳ ಜೀವ ರೂಪಗಳು ಇನ್ನೆಂದಿಗೂ ಸರಳವಾಗಿ ಉಳಿದಿಲ್ಲ. ಪ್ರತಿಯೊಂದು ಹೊಸ ತಾಂತ್ರಿಕ ಪ್ರಗತಿ, ವೈಜ್ಞಾನಿಕ ಅನ್ವೇಷಣೆ ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಹುಟ್ಟುಹಾಕಿ ನಮ್ಮಿಂದ ಉತ್ತರಗಳನ್ನು ನಿರೀಕ್ಷಿಸುತ್ತಿವೆ. "ಪರಲೋಕದ ಶಾಲೆಯಲ್ಲಿ" ನಾವು ಅದೆಷ್ಟು ಕಲಿಯುತ್ತೇವೆ ಎಂಬುದನ್ನು ಅರ್ಥಮಾಡಿಕೊಳ್ಳಲಿಕ್ಕೆ ಮೇಲಿನ ಚಿಂತನೆ ಹೇಗೆ ಸಹಾಯ ಮಾಡುತ್ತದೆ?

## ಕ್ರೈಸ್ತೀಯ ಶಿಕ್ಷಣ

**"ಯೆಹೋವನ ಭಯವೇ ಜ್ಞಾನಕ್ಕೆ ಮೂಲವು, ಪರಿಶುದ್ಧನ ತಿಳುವಳಿಕೆಯೇ ವಿವೇಕವು"** (ಜ್ಞಾನೋಕ್ತಿ 9:10).

ಮೇಲಿನ ವಾಕ್ಯವನ್ನು ಕುರಿತು ಚಿಂತನೆ ನಡೆಸಿರಿ. ಎರಡು ಬಹಳವಾಗಿ ಸಂಬಂಧಿಸಿದ ಪರಿಕಲ್ಪನೆಗಳನ್ನು ಈ ವಾಕ್ಯ ಸಂಭವಿಸುವಂತೆ ಮಾಡುತ್ತದೆ. ದೇವರ ಮಹಿಮೆ ಮತ್ತು ಶಕ್ತಿಯ ಕಂಡು ಆಶ್ಚರ್ಯಪಡುವಾಗ, ಭಕ್ತಿರೂಪದ "ಭಯ" ಉಂಟಾಗುತ್ತದೆ: ಅಂತಹ ದೇವರ ಗುಣಾತಿಶಯಗಳ ಕುರಿತ ಸತ್ಯವನ್ನು ಕಲಿಯುವಾಗ "ತಿಳುವಳಿಕೆ"ಯುಂಟಾಗುತ್ತದೆ. ಹೀಗಾಗಿ ಜ್ಞಾನ, ತಿಳುವಳಿಕೆ ಮತ್ತು ವಿವೇಕ ದೇವರಲ್ಲಿಯೇ ಬೇರೂರಿದೆ. ಇದು ಮೇಲಿನ ವಾಕ್ಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಎಲ್ಲವೂ ಅಸ್ತಿತ್ವಕ್ಕೆ ಬರುವುದಕ್ಕೆ ಕಾರಣ ಕರ್ತ: ದೇವರು. ಅಸ್ತಿತ್ವದಲ್ಲಿರುವುದನ್ನೆಲ್ಲ ಸೃಷ್ಟಿ ಮಾಡಿದವನು ಮತ್ತು ಅದೆಲ್ಲವನ್ನು ಸಂರಕ್ಷಿಸುತ್ತಿರುವವನೂ ಆತನೇ (ಯೋಹಾನ 1:1–3; ಕೊಲೊಸ್ಸೆ 1:16,17). ಮೂಲಕಣ, ಪತಂಗದ ಮರಿಹುಳ, ಸೂಪರ್ ನೋವಾಸ್ (ದೊಡ್ಡದಾದ ನಕ್ಷತ್ರ), ದೇವದೂತರು, ದೆವ್ವಗಳು, ಪರಲೋಕದಲ್ಲಿನ ರಾಜತ್ವ, ಅಧಿಕಾರ ಅವೆಲ್ಲ ಇವೆ. ದೇವರಿಂದಲೇ ಇವೆಲ್ಲವೂ ಅಸ್ತಿತ್ವದಲ್ಲಿರುವುದು. ಇದೆಲ್ಲವನ್ನು ನಾವು ಕಲಿತಿದ್ದೇವೆ. ಇದೆಲ್ಲವನ್ನು ತಿಳಿದುಕೊಂಡಿದ್ದೇವೆ. ಆದ್ದರಿಂದ ಎಲ್ಲ ನಿಜವಾದ ಜ್ಞಾನ, ವಿವೇಕ ಮತ್ತು ತಿಳುವಳಿಕೆಗಳು ಕೊನೆಗೆ ದೇವರ ಮೂಲದಿಂದಲೇ ಬಂದಿದೆಯೆಂಬುದು ಸ್ಪಷ್ಟವಾಯಿತು.

"**ದೇವರು ಪ್ರೀತಿಸ್ವರೂಪಿಯು**" (1 ಯೋಹಾನ 4:8) ಎಂಬ ವಿಷಯದಲ್ಲಿ ಸತ್ಯವೇದ ಬಹುಸ್ಪಷ್ಟ. ಈ ವಾಕ್ಯವನ್ನು ನಮ್ಮ ಪ್ರವಾದಿನಿಯಾದ ವೈಟಮ್ಮ ಬಹಳ ಅರ್ಥಗರ್ಭಿತವಾಗಿ ಹೀಗೆ ವಿವರಿಸಿದ್ದಾರೆ: ಸೃಷ್ಟಿಯ ಮತ್ತು ವಿಮೋಚನೆಯ ಆಧಾರ: ಪ್ರೀತಿ. ನಿಜವಾದ ಶಿಕ್ಷಣದ ಅಸ್ತಿವಾರವೂ ಪ್ರೀತಿಯೇ ಆಗಿದೆ. ಇದನ್ನು ದೇವರು ನಮ್ಮ ಜೀವನಕ್ಕೆ ಮಾರ್ಗದರ್ಶಿಯಾಗಿ ಕೊಟ್ಟಿರುವ ದೇವರ ಆಜ್ಞೆಯಲ್ಲಿ ಬಹಳ ಸರಳವಾಗಿ ನಿರೂಪಿಸಲಾಗಿದೆ. ಮೊದಲ ಮತ್ತು ಪ್ರಧಾನವಾದ ಆಜ್ಞೆ: ನಿನ್ನ ದೇವರಾಗಿರುವ ಕರ್ತನನ್ನು ಪೂರ್ಣಹೃದಯದಿಂದಲೂ ನಿನ್ನ ಪೂರ್ಣ

ಪ್ರಾಣದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು" (ಲೂಕ 10:27). ಸರ್ವಶಕ್ತನೂ, ಸರ್ವಾಂತರಯಾಮಿಯೂ ಮತ್ತು ಸರ್ವಜ್ಞಾನಿಯೂ ಆದ ದೇವರನ್ನು ಪೂರ್ಣಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣಬುದ್ಧಿಯಿಂದಲೂ ಪ್ರೀತಿಸುವುದೆಂದರೆ ನಮ್ಮ ಜೀವದ ಪ್ರತಿಯೊಂದು ರಂಗವೂ ಕ್ರಿಸ್ತನಲ್ಲಿ ಬಲಪಡಲಿ, ಉನ್ನತೀಕರಣಗೊಳ್ಳುವಂತೆ ವಿಕಾಸ ಹೊಂದಲಿ. ದೇವರನ್ನು ಪ್ರೀತಿ ಮಾಡುವುದೆಂದರೆ ನಮ್ಮ ದೇಹ, ನಮ್ಮ ಮನಸ್ಸು ಮತ್ತು ನಮ್ಮ ಆತ್ಮ ದೇವರ ಸ್ವರೂಪಕ್ಕೆ ಹಿಂತಿರುಗುವುದೇ ಆಗಿದೆ– ಎಜುಕೇಷನ್, ಪುಟ 16.

ಎಲ್ಲಾ ಜ್ಞಾನದ ಮತ್ತು ಎಲ್ಲಾ ನಿಜವಾದ ಶಿಕ್ಷಣದ ಮೂಲ ಕರ್ತನಾಗಿರುವುದರಿಂದ, ಎಲ್ಲಾ ಕ್ರೈಸ್ತೀಯ ಶಿಕ್ಷಣ ದೇವರ ಕಡೆಗೂ ಮತ್ತು ತನ್ನನ್ನೇ ತಾನು ಪ್ರಕಟಿಸಿಕೊಂಡ ಆತನ ವಾಕ್ಯದ ಕಡೆಗೆ ನಮ್ಮ ಮನಸ್ಸನ್ನು ಕೊಂಡೊಯ್ಯಲಿ. ಪ್ರಕೃತಿಯ ಮೂಲಕ, ಬರಹ ರೂಪದ ಆತನ ವಾಕ್ಯದ ಮೂಲಕ ಮತ್ತು ಕ್ರಿಸ್ತನನ್ನು ಪ್ರಕಟಿಸಿದ ಆತನ ವಾಕ್ಯದ ಮೂಲಕ ನಮಗೆ ಬೇಕಾದದ್ದೆಲ್ಲ ಕೊಡಲ್ಪಟ್ಟಿದೆ; ಕರ್ತನಿಂದ ರಕ್ಷಿಸಲ್ಪಡುವ ಮತ್ತು ಆತನನ್ನು ಸಂಪೂರ್ಣ ಹೃದಯದಿಂದಲೂ ಹಾಗೂ ಪೂರ್ಣ ಪ್ರಾಣದಿಂದಲೂ ಪ್ರೀತಿಸುವ ಸಂಬಂಧಕ್ಕೆ ಕರೆತರಲಾಗಿದೆ. ಪ್ರಕೃತಿಯು ಸಾವಿರಾರು ವರ್ಷಗಳಿಂದ ಕಲುಷಿತಗೊಂಡಿದ್ದರೂ, ಧರ್ಮಶಾಸ್ತ್ರದ ದೃಷ್ಟಿಕೋನದಿಂದ ಅದನ್ನು ವಾಚನಮಾಡಿದಾಗ, ದೇವರ ಒಳ್ಳೆಯತನ ಮತ್ತು ಆತನ ಗುಣಾತಿಶಯಗಳನ್ನು ಪ್ರಕೃತಿ ಇಂದಿಗೂ ಬಲಶಕ್ತಿಯಿಂದ ಮಾತನಾಡುತ್ತಿದೆ. ಆದರೂ ಬರಹರೂಪದ ಆತನ ವಾಕ್ಯ ಅಂದರೆ: ಸತ್ಯವೇದವು ಸತ್ಯದ ಪರಿಪೂರ್ಣ ಪ್ರಮಾಣವಾಗಿದೆ. ದೇವರು ಯಾರು, ಮಾನವರಿಗಾಗಿ ಆತನು ಏನು ಮಾಡಿದನು ಮತ್ತು ಏನು ಮಾಡುತ್ತಿದ್ದಾನೆ ಎಂಬುದರ ಮಹತ್ವಕಾರಿ ಪ್ರಕಟನೆಯನ್ನು ಮಾಡುತ್ತಿರುವುದೂ ಸಹ ಸತ್ಯವೇದವೇ ಆಗಿದೆ. ಧರ್ಮಶಾಸ್ತ್ರ ಮತ್ತು ಅದರ ಸೃಷ್ಟಿ ಹಾಗು ವಿಮೋಚನೆಯ ಸಂದೇಶ ಕ್ರೈಸ್ತೀಯ ಶಿಕ್ಷಣದ ಕೇಂದ್ರಬಿಂದುವಾಗಿರಲಿ.

ಅಪೋಸ್ತಲನಾದ ಯೋಹಾನನು ಕ್ರಿಸ್ತನನ್ನು ಕುರಿತು– "ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು; ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು

ಕೊಡುವಂಥದು" ಎಂದು ಹೇಳಿದ್ದಾನೆ (ಯೋಹಾನ 1:9). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕ್ರಿಸ್ತನಲ್ಲಿಯೇ ಪ್ರತಿಯೊಬ್ಬ ಮಾನವನಿಗೂ ಜೀವವುಂಟು; ಕ್ರಿಸ್ತನ ಮೂಲಕವೇ ಪ್ರತಿಯೊಬ್ಬ ಮಾನವನು ದೈವಿಕ ಬೆಳಕಿನ ಕಿರಣಗಳನ್ನು ಪಡೆಯುತ್ತಾನೆ; ಮತ್ತು ಶ್ರೇಷ್ಠ ಸತ್ಯತೆಯ ಮತ್ತು ಸದ್ಗುಣವನ್ನು ಅರ್ಥಮಾಡಿಕೊಳ್ಳುತ್ತಾನೆ.

ನಾವೆಲ್ಲರೂ ಹೋರಾಟದಲ್ಲಿದ್ದೇವೆ. ಅದು ಒಳ್ಳೆಯದರ ಮತ್ತು ಕೆಟ್ಟದರ ನಡುವಿನ ಮಹಾಸಂಘರ್ಷ. ಈ ಹೋರಾಟದಲ್ಲಿ ನಮ್ಮ ಆತ್ಮಗಳ ಶತ್ರು ನಾವು ಪಡೆದುಕೊಳ್ಳಬೇಕಾದ ಜ್ಞಾನವನ್ನು ಪಡೆದುಕೊಳ್ಳದಂತೆ ಮಾಡಲು ಬಹು ಪರಿಶ್ರಮದಿಂದ ಕೆಲಸ ಮಾಡಿ ಪ್ರತಿಬಂಧಕ ಮಾಡಲು ಯತ್ನಿಸುತ್ತಾನೆ. ಹೀಗಾಗಿ ಕ್ರೈಸ್ತೀಯ ಶಿಕ್ಷಣ ಏನೆಲ್ಲ ಕಲಿಸಲು ಯತ್ನಿಸುತ್ತದೆಯೋ ಅದರಲ್ಲಿ ವಿದ್ಯಾರ್ಥಿಗಳು, ಪರಲೋಕದಿಂದ ಕಳುಹಿಸುವ ಬೆಳಕನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡಬೇಕು.

ಹಾಗಿಲ್ಲದಿದ್ದರೆ ಏನಾಗುತ್ತದೆ? ಯೇಸುಸ್ವಾಮಿ– "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಎಂದು ಹೇಳಿದ್ದಾನೆ (ಮಾರ್ಕ 8:30). ವಿಜ್ಞಾನದಲ್ಲಿ, ಸಾಹಿತ್ಯದಲ್ಲಿ, ಅರ್ಥಶಾಸ್ತ್ರದಲ್ಲಿ ಅಥವಾ ಶಿಲ್ಪಶಾಸ್ತ್ರದಲ್ಲೂ ಮಹಾಪಾಂಡಿತ್ಯವನ್ನು ಸಾಧಿಸಿ, ಕೊನೆಗೆ ಬೆಂಕಿಯ ಕೆರೆಯಲ್ಲಿ ಎರಡನೇ ಮರಣವನ್ನು ಎದುರಿಸಬೇಕಾಗಿ ಬಂದರೆ, ಈ ಪಾಂಡಿತ್ಯದಿಂದ ಬಂದ ಭಾಗ್ಯವೇನು? ಇದಕ್ಕೆ ಉತ್ತರ ಸ್ಪಷ್ಟವಾಗಿ, ಹೀಗೂ ಆಗುವುದುಂಟೇ? ಎಂದಿರಬಹುದು.

ಆದ್ದರಿಂದಲೇ, ಈ ತ್ರೈಮಾಸಿಕದ ನಮ್ಮ ಪಾಠಗಳ ವಿಷಯ : "ಕ್ರೈಸ್ತೀಯ ಶಿಕ್ಷಣ" ಎಂದರೇನು? ಮತ್ತು ಒಂದು ಸಭೆಯಾಗಿ ನಾವು ಇಂತಹ ಶಿಕ್ಷಣವನ್ನು ಒಂದಲ್ಲ ಇನ್ನೊಂದು ರೀತಿಯಲ್ಲಿ ನಮ್ಮೆಲ್ಲ ಸಭಾ ಸದಸ್ಯರು ಪಡೆದುಕೊಳ್ಳಲು ಇರುವ ದಾರಿ ಯಾವುದು? ಎಂಬ ಪ್ರಶ್ನೆಗಳಿಗೆ ಉತ್ತರಿಸುತ್ತದೆ.

* * * * *